Regd. No. M 1299 SATYAVADI Fonnded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂವತ್ಸರ 29 ಸಂಚಿಕೆ 232 | ಗುರುವಾರ 4—7—46 | ಬಿಡಿ ಪ್ರತಿ 3 ಪೈ

ಪಂ|| ನೆಹರೂ
ಕಾಶ್ಮೀರಕ್ಕೆ ಹೋಗುವರು

ಕಾನ್ಪುರ ಜುಲೈ 2 — ಪಂಡಿತ್ ಜವಾಹರಲಾಲ್ ನೆಹರುರವರು ಭಾರತ ಕಾಂಗ್ರೆಸಿನ ಅಧಿವೇಶನದಲ್ಲಿ ಭಾಗವಹಿಸಲು ಕಾನ್ಪುರ ಮಾರ್ಗವಾಗಿ ಬೊಂಬಾಯಿಗೆ ತೆರಳಿದರು. ಅಧಿವೇಶನ ಮುಗಿದ ನಂತರ ಪುನಃ ನಾನು ಕಾಶ್ಮೀರಕ್ಕೆ ಭೇಟಿ ಕೊಡುವುದಾಗಿ ಪಂ|| ನೆಹರು ತಿಳಿಸಿದರು.

ಜಾತೀ ದಂಗೆ

ಮಾಂಘೀರ್ ಜುಲೈ 2 — ಮಾಂಘೀರ್ ಸಿನಿಮಾ ಮಂದಿರದಲ್ಲಿ ಗಲಭೆ ಆರಂಭವಾಯಿತು. ಆ ಗಲಭೆ ಊರ ಲೆಲ್ಲಾ ಪ್ರಸರಿಸಿ ಕೋಮುವಾರು ಗಲಭೆಯಲ್ಲಿ ಸಂಗೀತಗಾರನೊಬ್ಬನು ಏಟು ಬಿದ್ದು ಸತ್ತನು.

ಬಂಗಾಳಕ್ಕೆ ಅಕ್ಕಿ ಸಿಕ್ಕಿತು

ಕಲ್ಕತ್ತಾ ಜುಲೈ 2 — ಬರ್ಮಾದಿಂದ 9 ಸಾವಿರ ಟ್ರಾ ಅಕ್ಕಿ ಈ ತಿಂಗಳಲ್ಲಿ ಬಂಗಾಳಕ್ಕೆ ಸಿಕ್ಕುವುದು.

ನಿಯೋಗ ಲಂಡ್ ಸೇರಿತು

ಲಂಡ್ ಜುಲೈ 2 — ಭಾರತಕ್ಕೆ ಆಗಮಿಸಿದ್ದ ಬ್ರಿಟೀಷ್ ವಂತ್ರಿ ನಿಯೋಗ ಲಂಡ್ ಸೇರಿತು. ಮುಖ್ಯಾಂಶಗಳಲ್ಲಿ ನಮಗೆ ಜಯದೊರೆತಿರುವುದಾಗಿ ಲಾರ್ಡ್ ಪೆಥಿಕ್ ಲಾರೆನ್ಸ್ ತಿಳಿಸಿದರು. ಲಂಡನ್ನಿನಲ್ಲಿ ಅವರಿಗೆ ಸುಸ್ವಾಗತ ಸಿಕ್ಕಿತು.

ವಿಶ್ವಸಂಸ್ಥೆಗೆ ಆಫ್ರಿಕದ ದೂರು

ಡರ್ಬಾ ಜುಲೈ 2 — ಶ್ರೀ ಸೋರಾಬ್ಜಿರು ಸ್ತುಂಜೀಯವರಿಗೆ ಸತ್ಯಾಗ್ರಹ ಕಾರಣದಿಂದ 3 ತಿಂಗಳು ಕಠಿಣ ಸಜೆಯನ್ನು ವಿಧಿಸಲಾಯಿತು. ದಕ್ಷಿಣ ಆಫ್ರಿಕಾ ವಿಷಯದಲ್ಲಿ ವಿಶ್ವ ಸಂಸ್ಥೆಗೆ ವಿವರವನ್ನು ಕೊಡುವ ಸಲುವಾಗಿ ದಕ್ಷಿಣ ಆಫ್ರಿಕಾ ಇಂಡಿಯನ್ ಕಾಂಗ್ರೆಸಿನ ಚಾಧ್ಯರಿಯವರು ಲಂಡನ್ನಿಗೆ ಪ್ರಯಾಣ ಬೆಳೆಸಿದರು

ಅಂತ್ಯ ಚಳುವಳಿ ಹೂಡಿ

ಲಕ್ನೋ ಜುಲೈ 2 — ಬ್ರಿಟೀಷ್ ವಂತ್ರಿ ನಿಯೋಗದ ಸಲಹೆಗಳೆಲ್ಲವನ್ನು ಸಂಪೂರ್ಣವಾಗಿ ನಿರಾಕರಿಸಿ ಭಾರತದ ಸ್ವಾತಂತ್ರ್ಯವನ್ನು ಪಡೆಯುವ ಸಲುವಾ ಅಂತ್ಯ ಚಳುವಳಿಯನ್ನು ಹೂಡಿ ಎಂಬ ನಿರ್ಣಯವನ್ನು ಅಖಿಲಭಾರತ ಯುವಕ ಸಂಘದ ಅಧ್ಯಕ್ಷ ಶ್ರೀ ಎ. ಶೆವಾಣಿ ಕಾಂಗ್ರೆಸ್ ಅಧಿವೇಶನಕ್ಕೆ ಕಳುಹಿಸಿದ್ದಾರೆ.

ಕಾಮನ್ಸಿನಲ್ಲಿ ಭಾರತ ಚರ್ಚೆ

ಜಾತಿ ಜ್ವಾಲಾಮುಖಿ
ಅಡಗಿಸಿ

ಪೂನಾ, ಜುಲೈ 2 — ಅಹಮದಾಬಾದ್ ಘಟನೆಯನ್ನು ಕುರಿತು ಗಾಂಧೀಜೀಯವರು ಬೊಂಬಾಯಿ ಗೃಹ ವಂತ್ರಿ ಮುರಾರ್ಜಿ ದೇಸಾಯಿಯವರಿಗೆ ಪ್ರಾಣಕೊಟ್ಟಾದರೂ ಕೋಮು ದಂಗೆಯನ್ನು ನಿಲ್ಲಿಸಿ ಎಂದಿರುವರು. ಅಹ್ಮದಾಬಾದಿನ ಪ್ರದೇಶಗಳು ಮಿಲ್ಟ್ರಿ ಬಂದೋ ಬಸ್ತಿನಲ್ಲಿದೆ.

ದಕ್ಷಿಣ ಆಫ್ರಿಕಾ ಸತ್ಯಾಗ್ರಹಿಗಳ
ಸಾಹಕ್ಕೆ ನಾನು ಅಳುವುದಿಲ್ಲ

ಪೂನಾ ಜುಲೈ 2 — ಗಾಂಧೀಜಿಯವರ ಪ್ರಾರ್ಥನಾ ಸಭೆಯಲ್ಲಿ ಅನೇಕ ಮಂದಿ ನೆರೆದಿದ್ದರು. ದಕ್ಷಿಣ ಆಫ್ರಿಕಾ ಏಜೆಂಟ್ಯರ ಭಾರತ ವಿರುದ್ಧ ಶಾಸನವನ್ನು ಖಂಡಿಸಿದರು. ಶ್ವೇತರ ಅಶಾಂತಿ ಕಾರ್ಯಾಚರಣೆಯನ್ನು ಖಂಡಿಸಿದರು. 'ದಕ್ಷಿಣ ಆಫ್ರಿಕಾ ಸತ್ಯಾಗ್ರಹಿಗಳು ಭಾರತದ ಗೌರವವನ್ನು ಕಾಪಾಡುತ್ತಿರುವರು' ಎಂಬುದಾಗಿ ಗಾಂಧೀಜಿಯವರು ಸಭೆಯಲ್ಲಿ ತಿಳಿಸಿದರು

ಹೈದರಾಬಾದಿನಲ್ಲಿ ನೈಜಾಮರನ್ನು ತಾ || 8 ರಲ್ಲಿ ಮಿ || ಜಿನ್ನಾರವರು ಭೇಟಿ ಮಾಡುವರು.

ಂ ಂ

ಪ್ಯಾಲಿಸ್ಟೈನಿನ ಘಟನೆ ಬಗ್ಗೆ ಟ್ರೂಮನ್ನರು ವಿಷಾದ ವ್ಯಕ್ತಪಡಿಸಿದ್ದಾರೆ.

ಂ ಂ

ಬಿಣು ಬಾಂಬು ಪ್ರಯೋಗ ಕುರಿತು ಅದರಿಂದ ಶಾಂತಿ ಮತ್ತು ಸ್ವಾತಂತ್ರ್ಯ ದೊರೆಯುವುದಿಲ್ಲವೆಂದು ಪಂ|| ನೆಯರು ಅಭಿಪ್ರಾಯಪಟ್ಟಿದ್ದಾರೆ.

ಅಧಿಕಾರಿಗಳ ಅಪಹರಣ

ಪೆಷಾವರ್ ಜುಲೈ 2 — ಜೆ.ಟಿ ಎಸ್. ಡೊನಾಲ್ಡ್ ವಜೀರಿಸ್ತಾನದ ಪೊಲಿಟೆಕಲ್ ಏಜೆಂಟರು ಡಾ|| ನಾಜೀರ್ ಅಹ್ಮದ್ ಆವರ ಸಶ ಅಧಿಕಾರಿಗಳು ರಜನುಕ್ ಸರರೋಧಾ ರಸ್ತೆಯಲ್ಲಿ ಗುಡ್ಡಗಾಡು ಒನರು ಅವರುಗಳನ್ನು ಅಪಹರಿಸಿದ್ದು ಈಗ ಬಿಟ್ಟಿದ್ದಾರೆ. ಅವರುಗಳಿಗೆ ಯಾವ ತೊಂಡರೆಯು ಆಗಿಲ್ಲವಂತೆ!

ಡಕ್ಕಾ ಗಲಭೆ ಪ್ರಕರಣ

ಡಕ್ಕಾ ಜುಲೈ 2 — ಡಾಕ್ಕಾದಲ್ಲಿ ನಡೆದ ಜಾತೀ ದಂಗೆಯಲ್ಲಿ 2 ಸಾವು ಮತ್ತು 17 ಮಂದಿಗೆ ಗಾಯವೂ ಉಂಟಾಗಿದೆ.

ಂ

ಮದರಾಸು, ಜುಲೈ 2 — ಇನ್ನು ಮುಂದೆ ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲೀಷ್ ನ್ನು ಎರಡನೇ ಭಾಷೆಯಾಗಿ ಪರಿಗಣಿಸಲಾಗುವುದು.

ಂ ಂ

ಮದರಾಸು, ಜುಲೈ 2 — ಗೋಧಿಹಿಟ್ಟು ಹೆಚ್ಚು ಪ್ರಚಾರವಾಗಲು ಬೆಲೆಯು ಮಣಕ್ಕೆ ರೂ. 14 ರಿಂದ ರೂ 9 ಕ್ಕೆ ಇಳಿಸಲಾಗಿದೆ.

ಂ ಂ

ವಾಷಿಂಗ್ಟನ್, ಜೂ 29 — ಇಲ್ಲಿ 3 ಮಿಲಿಯ ಡಾಲರ್ ಖರ್ಚಿನಿಂದ ಒಂದು ಮಸೀದಿ ಕಟ್ಟಿಸಲು ಅರಬ್ ಪ್ರಮುಖರು ತೀರ್ಮಾನಿಸಿರುವರು. ಈಜಿಪ್ಟ್ ರಾಜರು ಮತ್ತು ಆಗಾಖಾನರು ಮುಂತಾದವರು ಸಹಾಯ ಮಾಡುವರು.

.....

× ಫ್. ಐ. ಸಿ. ಸಿ. ಅಧಿವೇಶನದಲ್ಲಿ ಹವಾ ನಿಮಿತ್ತ ರಾಜೇಂದ್ರ ಬಾಬು ಭಾಗವಹಿಸುವುದಿಲ್ಲ.

ಇಂದಿನ ವರ್ತಮಾನ

ಸ್ಯಾಕ್ ಫ್ರಾನ್ಸಿಸ್ಕೊ ಜುಲೈ 2 — ಸೋಮವಾರ ಕ್ಯಾಲಿಫೋರ್ನಿಯಾದ ವಾಟರ್ಸವೆಟ್ ಕ್ಯಾಂಪಿನಲ್ಲಿ 600 ಮಂದಿ ಅಮೆರಿಕಾ ಖೈದಿಗಳು ದೊಂಬಿ ನಡೆಸಿದರು.

ನವದೆಹಲಿ ಜುಲೈ 2 — ತಾ|| 15 ಮತ್ತು 16 ರಲ್ಲಿ ಲಂಡನ್ನಿನ ಕಾಮನ್ಸ್ ಸಭೆಯಲ್ಲಿ ಭಾರತದ ಬಗ್ಗೆ ಚರ್ಚೆ ನಡೆಯುವುದೆಂದು ಹೇಳಲಾಗಿದೆ. ಮಿ|| ಚರ್ಚಿಲ್ಲರು ಕಾರ್ಮಿಕ ಸರ್ಕಾರದ ಭಾರತ ನೀತಿಯನ್ನು ಟೀಕಿಸುವರು ಚರ್ಚೆಯ ಕಾಲದಲ್ಲಿ ನೂತನ ತಾತ್ಕಾಲಿಕ ಯೋಜನೆಯನ್ನು ವಿವರಿಸುವುದಿಲ್ಲವೆಂದು ವಂದಿಪ್ರಕಾರ ತಿಳಿಯುವುದು. ಘಟನಾ ಸಮಿತಿ ಜನಾಂಗಗಳವರೆಗೂ ತಾತ್ಕಾಲಿಕ ಯೋಜನೆಯ ಘೋಷಣೆ ನಡೆಯುವುದಿಲ್ಲವೆಂದು ಹೇಳಲಾಗಿದೆ.

ಕಾಂಬೆ ಜುಲೈ 3 — ಸಮುದ್ರ ಕಳ್ಳರ ರಾಣಿ ಎಂದು 15 ವರ್ಷಗಳಿಂದ ಪ್ರಖ್ಯಾತಿಯಾಗಿರುವ 37 ವಯಸ್ಸಿನ ಅಕರ್ತಜೀಯವಾಗಿರುವ ಟಾಂಕಾಕಿಯು ದಸ್ತಗಿರಿ ಮಾಡಿದ್ದಾರೆ.

ಮದರಾಸು ಜುಲೈ 3 — ರಚನಾ ಸಂಸ್ಥೆಯಲ್ಲಿ 3 ಸ್ಥಾನಗಳನ್ನು ಆಂಗ್ಲೋ ಇಂಡಿಯನ್ ಜನರಿಗೆ ಕೊಡಲು ಕಾಂಗ್ರೆಸ್ ನಿರ್ಧರಿಸಿದೆ.

ಬೊಂಬಾಯಿ ಜುಲೈ 3— ಜಿ. ಐ. ಪಿ ರೈಲ್ವೆ ವರ್ಕ್‌ಷಾಪಿನ 8 ಸಾವಿರ ಕೆಲಸಗಾರರು ಮುಷ್ಕರಹಿಡಿದಿದ್ದಾರೆ.

ನ್ಯಾಯವಿಧಾಯಕ ಸಭೆ

ವಿ. ಬಾ] ಬೆಂಗಳೂರು, ಜುಲೈ 3

ಈ ದಿವಸದ ಸಭೆಯು ಪ್ರಾರಂಭದಲ್ಲಿ ಕೆಲ ಮುಖ್ಯ ಪ್ರಶ್ನೋತ್ತರಗಳು ನಡೆದವು.

ಶಾಲಾ ಪಠ ಪುಸ್ತಕ ಸಿಕ್ಕದಿರುವ ವಿಷಯದಲ್ಲಿನ ಪ್ರಶ್ನೆಗೆ ಸರ್ಕಾರವು ಸೂಕ್ತ ಏರ್ಪಾಡು ಮಾಡಲಾಗುತ್ತಿದೆ ಎಂದು ಉತ್ತರಕೊಟ್ಟಿತು.

ಲಂಚನಿರೋಧದ ವಿಚಾರವಾಗಿ ಒಂದು ಪ್ರಶ್ನೆಗೆ ಸರಕಾರದವರು ಸಮಿತಿಯು ಶಿಫಾರಸ್ಸನ್ನು ಪರಿಶೀಲಿಸುತ್ತಿರುವುದಾಗಿ ಉತ್ತರವಾಯಿತು.

ಮೈಸೂರು ಅಂಚೆ ಇಲಾಖೆಯು 1887 ರಲ್ಲಿ ವರ್ಗಾಯಿಸಲಾಯಿತೆಂದೂ ಸರ್ಕಾರಿ ಕಾಗದಪತ್ರವನ್ನು ಉಚಿತವಾಗಿ ತೆಗೆದುಕೊಂಡುಹೋಗಲು ಕರಾರಾಯಿತೆಂದೂ, ಮೆತ್ತಾವ ಹಣದ ಪ್ರತಿಫಲವೂ ಇಲ್ಲವೆಂದೂ ಒಂದು ಪ್ರಶ್ನೆಗೆ ಸರಕಾರದ ಉತ್ತರವಾಯಿತು.

ಮತ್ತೆ ಯುದ್ಧವೇ ?

(ಮು.ಂದ.ವರಿದ.ದು)

ಇದಕ್ಕೆ ನೆರವಾಗಿ ಆಟಂಬಾಂಬು ವಿಷಯವು ಬಹಳ ಅಲ್ಲಕಲ್ಲೋಲಗಳಿಗೆ ಕಾರಣವಾಗಿತ್ತಿದೆ ಒಂದು ಕಡೆ ಜುಲೈ ಒಂದನೇ ತಾರೀಖಿನ ದಿನ ಮಹಾ ಸಮುದ್ರ ಮಧ್ಯದಲ್ಲಿ ಆಟಂಬಾಂಬು ಪ್ರಯೋಗದ ಫಲಿತಾಂಶವನ್ನು ತಿಳಿದು ಕೊಳ್ಳಲು ಪ್ರಯತ್ನಗಳನ್ನು ನಡಿಸುತ್ತಲೂ ಅಮೆರಿಕಕ್ಕೆ ಪ್ರೆಸಿಡೆಂಟು ಟ್ರೂಮ್ಯಾ ಅಣುಪರಿಶೋಧನಾವಕಾಶವನ್ನು ಅಂತರ್ಜಾತೀಯವಾಗಿ ಮಾಡಬೇಕೆಂದು ಪ್ರತಿಪಾದಿಸುತ್ತಿದ್ದಾನೆ. 'ಇದರ ಭಾವವೇನೂ ತಿರುಮಲೇಶ' ಎಂದು ಆಲೋಚಿಸಿದಲ್ಲಿ ಆಟಂಬಾಬಿಗಿಂತ ಅತಿ ಘೋರವಾದ ಬೇರೊಂದು ಅಸ್ತ್ರವು ಅಮರಿಕದ ಕೈಯ್ಯಲ್ಲಿದೆಯೆಂಬುದು ಅಮೆರಿಕ ನೌಕಾಶಾಖಾಧಿಕಾರಿಯು ಮಾಡಿರುವ ಪ್ರಕಟಣೆಯಿಂದ ಸಮಾಧಾನವು ಸಿಗುತ್ತದೆ. ಪರಮಾಣು ಪ್ರಯೋಗವು ಅಮೆರಿಕಕ್ಕೆ ಸಂಪೂರ್ಣವಾಗಿ ತಿಳಿದಿರುವದೇ ಅಲ್ಲದೆ ಅದರ ತಾತನಂಥಾ ವುತ್ತೊಂದು ಪ್ರಯೋಗವು ಕೂಡ ತಿಳಿದಿರುವದರಿಂದ ಸಹಜವಾಗಿ ಇತರ ದೇಶಗಳವರ ಬಲಾಬಲಗಳನ್ನು ಕಂಡು ಕೊಳ್ಳಬೇಕೆಂಬ ಅಭಿಲಾಷೆಯು ಅಮೆರಿಕಾಕ್ಕೆ ಇರುತ್ತದೆ. ಆದರೆ ರಷ್ಯವು ಕೂಡ ಈ ವಿಷಯದಲ್ಲಿ ಅಮೆರಿಕಾಕ್ಕಿಂತ ಎರಡು ಪುಟ ಹೆಚ್ಚಾಗಿ ಹಿದಿಕ್ಕೊಂಡಿರುವಂಥಾದ್ದಾದುರಿಂದ ತಮ್ಮ ರಹಸ್ಯಗಳನ್ನು ಹೊರಗೆಡವದೆ ' ನಮಗೆ ಕೂಡ ಪರಮಾಣು ಶಕ್ತಿ ಮಾತ್ರವೇ ಅಲ್ಲದೆ ಇನ್ನೂ ಎಷ್ಟೋ ಇತರ ಶಕ್ತಿಗಳು ಕೂಡ ಜಾಗ್ರತೆಯಿಂತೆಯೇ ಲಭಿಸುತ್ತವೆ ' ಎಂದು ರಷ್ಯನ್ನೂ ಅಧಿಕಾರಿಗಳು ಹೆದಾಸುತ್ತಿದ್ದಾರೆ. ಆದುದರಿಂದ ಈ ಕಡೆಗೆ ರಷ್ಯಾ ಆ ಕಡೆ ಅಮೆರಿಕಾ ಈ ಎಂಡಕ್ಕೂ ಕೂಡ ಅಣು ಶಕ್ತಿಯೇ ಅಲ್ಲದೆ ಇನ್ನೂ ಶಕ್ತಗಳಿರುವವೆಂದು ಅರ್ಥವಾಗುತ್ತದೆ ಆದುದರಿಂದ ಒಬ್ಬರ ಮೇಲೆ ಮತ್ತೊಬ್ಬರು ಕಾಲು ಕೆರೆಯಲು ಆ ಧೈರ್ಯಪಡಬೇಕಾಗಿಲ್ಲ. ಹೀಗೆ ಪುನಃ ಯುದ್ಧವು ಸಂಪ್ರಾಪ್ತವಾಗಲು ಕೂಡ ಆವಕಾಶವಿಲ್ಲದೆ ಹೋಗಲಿಲ್ಲ. ಬ್ರಿಟನ್ನಿಗೆ ಇನ್ನೂ ಇಂಥಾ ಶಕ್ತಿಗಳು ಸಂಪೂರ್ಣವಾಗಿ ಸಿದ್ಧಿಸಿರುವಂತೆ ಕಾಣ ಒರುವುದಿಲ್ಲ. ಈ ಕಾರಣದಿಂದ ಜರ್ಮನಿಯಿಂದ ಕೆಲವರು ಶಾಸ್ತ್ರ ವೇತ್ತರನ್ನು ಕರೆಕಳುಹಿಸಿ ರಾಕೆಟ್ಟುಗಳ ಪರಿಶೋಧನೆಗಳನ್ನು ಮಾಡಿಸುವಿಕೆಯಿಂದ ತಾನೂ ರಷ್ಯಾ ಅಮರಿಕಾಗಳ ಸಮಾನ ಶಕ್ತಿಯನ್ನು ಪೊಂದಲು ಯತ್ನಿಸುತ್ತಿದೆ.

ಆದುದರಿಂದ ಬಹುಶಃ ಜಾಗ್ರತೆಯಲ್ಲಿಯೇ ಪುನಃ ಪ್ರಪಂಚ ಯುದ್ಧವು ಬರಬಹುದೆಂದೂ ಅದರಲ್ಲಿ ಅಣುಶಕ್ತಿಯೂ ಅದನ್ನು ಮೀರಿದ ಶಕ್ತಿಯೂ ಆಯುಧಗಳಾಗಿರುತ್ತವೆಂದೂ ಅಮೆರಿಕಾ ಬ್ರಿಟನ್ನೂ, ರಷ್ಯಾಗಳು ಮುಖ್ಯ ಪಾತ್ರಧಾರರೆಂದೂ ಅಂದು ಕೊಳ್ಳಲು ಅಕ್ಷೇಪಣೆ ಇರುವುದಿಲ್ಲ. (ದಿ. ವಾ.)

ಮೂರನೆಯ ಮಹಾಯುದ್ಧದ ಅವಶ್ಯಕತೆ ಇಲ್ಲದಂತೆ ಪರಮಾತ್ಮನು ವಿಶ್ವಮಂಡಲಿಯವರ ಮಾನಸದಲ್ಲಿ ಅಖಂಡ ಶಾಂತಿ ಬೀಜವನ್ನು ನೆಡಲೆಂದು ಹಾರೈಸೋಣ. —ಸಂ.]

STUDENTS !

Are you despairful of the forthcoming September Examinations ? Here is good news for you. An English Honours Graduate with wide experience of books and journalistic experience undertakes to prepare first-rate Essays on English Texts prescribed for the Intermediate, B. A., and B. Sc., classes. Excellent service for moderate charges.

Apply to— Rao,
2180 Woodyard
Chamundi Extension, Mysore

For Good Printing
L. N. Press
Sriramp et MYSORE

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಸ್ವಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಸುಖ ಆರೋಗ್ಯ ಆನಂದದಾಯಕ ಶ್ರೀ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸಂಘದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪.' ಗೋವಿಂದಪ್ಪ ನಾಯಕ' ರಸ್ತೆ, ಜಿ. ಟಿ. ಮದರಾಸು.

Get Medical Diplomas

At home :— Ayurvedic Homeopathic, Unani, etc Prospectus Free.

Old Indian Medical College
Kotgarh, Simla

At Ranjit
2 ನೇ ವಾರ
S H A D I
ಪಾತ್ರ—ಮಾಧುರಿ—ಮೋತಿಲಾಲ್. ಕುಷಿದ್— ಈಶ್ವರಲಾಲ್
ಶಾದಿ
From 5–7–46
Bahoo Betiyan

At Opera
From 26–6–46
COBRA WOMAN
— In Technicolor —
Featuring—
MARIA MONTEZ
JON HALL
MYSORE SABU
Daily 3 Shows
6–7–46 ರಿಂದ
ಲವಂಗಿ (ತಮಿಳು)

Edited, Printed and published by M. S. Krishna Rao, at the Satvavadi Press, Chamaraja Agrahar, Mysore